# ಅಪ್ಪ

## ಅಂಗೈಯಲ್ಲಿನ ಅಳಿಸದ ರೇಖೆ

ವಿವಿಧ ಕ್ಷೇತ್ರಗಳ ಯುವ ಪ್ರತಿಭಾವಂತರು ತಮ್ಮ ಅಪ್ಪಂದಿರ ಕುರಿತು ಇಲ್ಲಿ ಕಟ್ಟಿಕೊಟ್ಟಿರುವ ಕಿರುಚಿತ್ರಗಳು, ವೈಯಕ್ತಿಕ ಪರಿಧಿಯನ್ನು ಮೀರಿ ‘ಅಪ್ಪ’ ಎನ್ನುವ ಪರಿಕಲ್ಪನೆಯನ್ನು ಅರ್ಥೈಸಲು ತುಡಿಯುತ್ತಿರುವಂತಿವೆ. ನಮ್ಮ ವ್ಯಕ್ತಿತ್ವದ ಭಾಗವೇ ಆಗಿದ್ದರೂ ನೆನಪಿನಸಂಚಿಯಲ್ಲಿನ ಅಪ್ಪನ ಬಗೆಗಿನ ವಿಶಿಷ್ಟ ನೆನಪುಗಳನ್ನು ಹೆಕ್ಕುವುದು ಸಲೀಸಲ್ಲ ಎನ್ನುವುದಕ್ಕೂ ಈ ಟಿಪ್ಪಣಿಗಳು ಉದಾಹರಣೆಯಂತಿವೆ. ಸಹೃದಯರ ಹೃದಯಗಳನ್ನು ಬೆಳಗುವಂತಿರುವ, ಆ ಬೆಳಕಿನಲ್ಲಿ ನಂನಮ್ಮ ಅಪ್ಪಂದಿರ ಜೊತೆಗಿನ ಆರ್ದ್ರಕ್ಷಣಗಳನ್ನು ಜೀವಗೊಳಿಸುವಂತಿರುವ ಕಿರುಬರಹಗಳು, ಜೂನ್ 16ರ ಅಪ್ಪಂದಿರ ದಿನದ ಸ್ಪೆಷಲ್.

■ ನಿರ್ವಹಣೆ: ಗೌರಿ

